**ಎಂ ವಿ ಸಿ 1068/2024 ಪಿಡಬ್ಲ್ಯೂ2**

**ಸಾಕ್ಷಿಯನ್ನು ದಿ: 24.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಲ್ ಸಿ ಎಸ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ಮೆಡಿಕಲ್ ರೆಕಾರ್ಡ, 3 ಹೊರರೋಗಿ ಚೀಟಿಗಳು, 3 ಪ್ರಯೋಗಾಲಯ ವರದಿಗಳು ಹಾಗೂ 7 ಎಕ್ಸರೇಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ 55 ರಿಂದ 67 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಕೆ ಪಿ ಕೆ ವಕೀಲರ ಪರವಾಗಿ ಶ್ರೀ ಎಂ ಜಿ ಎಸ್ ವಕೀಲರಿಂದಃ**

ಗಾಯಾಳುವು ನನ್ನ ಬಳಿಗೆ ಬರುವುದಕ್ಕಿಂತ ಮೊದಲು ಪಾಂಡವಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು. ಗಾಯಾಳುವಿನ ಹೇಳಿಕೆ ಮತ್ತು ದಾಖಲಾತಿಯ ಆಧಾರದ ಮೇಲೆ ನಾನು ಹಾಗೆ ಹೇಳುತ್ತಿದ್ದೇನೆ. ನಮ್ಮ ಆಸ್ಪತ್ರೆಗೆ ಗಾಯಾಳು ಬಂದಾಗ ಯಾವುದೇ ರೀತಿಯ ರಕ್ತಸಿಕ್ತ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ 19.04.2024 ರಂದು ಅಪಘಾತ ಆಗಿದೆ. ಅವರು ನಮ್ಮ ಆಸ್ಪತ್ರೆಗೆ ಬಂದಿದ್ದು ದಿನಾಂಕ 20.04.2024. ದಿನಾಂಕ 19.04.2024 ರಂದು ಅಪಘಾತ ಆದ ನಂತರ ನಮ್ಮ ಆಸ್ಪತ್ರೆಗೆ ದಿನಾಂಕ 20.04.2024 ರಂದು ಬಂದಿರುವ ಕಾರಣ ಆ ವೇಳೆಗಾಗಲೇ ಗಾಯಗಳು ಒಣಗಿರುತ್ತವೆ ಮತ್ತು ಅವು ರಕ್ತ ಸಿಕ್ತವಾಗಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ಆಸ್ಪತ್ರೆಯಲ್ಲಿ ಗಾಯಾಳುವಿನ ಮುರಿದ ACL ಭಾಗಕ್ಕೆ ಶಸ್ತ್ರ ಚಿಕಿತ್ಸೆ ಮಾಡಿದ್ದೇವೆ. ಮುಖದ ಮುರಿದ ಮೂಳೆಗೆ ಕನ್ಸರ್ ವೇಟಿವ್ ಚಿಕಿತ್ಸೆ ನೀಡಿದ್ದೇವೆ. ಮೂಳೆ ಮುರಿದ ಬಗ್ಗೆ

ಗಾಯಾಳುವಿನ ಸಂಬಂಧಪಟ್ಟ ಭಾಗದ ಎಂ ಆರ್ ಐ ಮಾಡಿದ್ದೇನೆ. ಅದಕ್ಕೆ ಸಂಬಂಧಿಸಿದ ಎಂ ಆರ್ ಐ ಮತ್ತು ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ACL ಭಾಗಕ್ಕೆ ನಾನು ಶಸ್ತ್ರ ಚಿಕಿತ್ಸೆ ಮಾಡಿದಾಗ ಅದು ಯಶಸ್ವಿಯಾಗಿತ್ತು ಎಂದರೆ ಸರಿ. ಕೊನೆಯ ಬಾರಿ ಚೆಕ್ ಎಕ್ಸರೇ ಮಾಡಿದಾಗ ಆ ಭಾಗ ಕೂಡಿಕೊಂಡಿತ್ತು ಎಂದರೆ ಸರಿಯಲ್ಲ. ನಾನು ನೀಡಿದ ಸಲಹೆಯನ್ನು ಗಾಯಾಳುವು ಪಾಲಿಸದೆ ಇರುವ ಕಾರಣ ಅವರ ಮೂಳೆಗಳು ಸ್ವಲ್ಪ ವಕ್ರವಾಗಿ ಕೂಡಿಕೊಂಡಿವೆ ಎಂದರೆ ಸರಿಯಲ್ಲ. ಸ್ವಾಭಾವಿಕವಾಗಿ ಲಿಗಮೆಂಟ್ ಟಿಯರ್ ಆಗಿರುವ ಕಾರಣ ನಾನು ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಿದ್ದರೂ ಸಹ ಅರ್ಜಿದಾರರಿಗೆ ನಾನು ಗುರುತಿಸಿದಂತಹ ನ್ಯೂನತೆಗಳು ಇವೆ. ಅರ್ಜಿದಾರರಿಗೆ ಯಾವುದೇ ನ್ಯೂನತೆ ಇಲ್ಲದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುವಿನ ಮುಖದ ಮೂಳೆ ಮುರಿದಿದ್ದ ಸಂಬಂಧ ಸಿ ಟಿ ಸ್ಕ್ಯಾನ್ ಮಾಡಿದ್ದು ಅದರ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಅದಕ್ಕೆ ಸಂಬಂಧಿಸಿದ ಅಂಗ ನ್ಯೂನತೆಯ ಪ್ರಮಾಣವನ್ನು ನಾನು ನಿರ್ಧರಿಸಿಲ್ಲ. ಯಾವ ಮಾನದಂಡಗಳನ್ನು ಅನುಸರಿಸಿ ಅಂಗನ್ಯೂನತೆಯನ್ನು ಅಂದಾಜು ಮಾಡಬೇಕೋ ಆ ಮಾನದಂಡಗಳನ್ನು ಅನುಸರಿಸಿದ್ದರೂ ಸಹ ನಾನು ಹಾಕಿರುವ ಲೆಕ್ಕಾಚಾರ ತಪ್ಪಿನಿಂದ ಕೂಡಿದೆ ಎಂದರೆ ಸರಿಯಲ್ಲ. 2024 ರ ಕೇಂದ್ರ ಸರ್ಕಾರದ ಮಾರ್ಗಸೂಚಿ ಅನುಸಾರ ಅಂಗನ್ಯೂನತೆಯನ್ನು ಲೆಕ್ಕಚಾರ ಮಾಡಿದ್ದೇನೆ. ಮೊಬಲಿಟಿ, ಸ್ಟೆಬಿಲಿಟಿ ಹಾಗೂ ಅಡಿಷನಲ್ ಪಾಯಿಂಟ್ ಈ ಮೂರು ಮಾನದಂಡಗಳಿಗೆ ವಿರುದ್ಧವಾಗಿ ನಾನು ಲೆಕ್ಕಾಚಾರ ಮಾಡಿದ್ದೇನೆ ಎಂದರೆ ಸರಿಯಲ್ಲ. ಶೇಕಡ 26 ರಷ್ಟು ಅಂಗನ್ಯೂನತೆಯಿಂದ ಅರ್ಜಿದಾರರು ಬಳಲುತ್ತಿದ್ದಾರೆ ಎಂದು ಉತ್ಪ್ರೇಕ್ಷಿಭರಿತ ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ವ್ಯವಸಾಯ ಮತ್ತು ವ್ಯಾಪಾರ ಮಾಡುತ್ತಾರೆ ಎಂದು ನನಗೆ ಹೇಳಿದ್ದಾರೆ. ಅರ್ಜಿದಾರರು ಈಗಲೂ ಸಹ ವ್ಯವಸಾಯ ಮತ್ತು ವ್ಯಾಪಾರವನ್ನು ಮಾಡಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು ಅಂದಾಜು ಮಾಡಿರುವ ಅಂಗ ನ್ಯೂನತೆಯು ದೇಹದ ಒಂದು ಭಾಗಕ್ಕೆ ಅನ್ವಯಿಸುತ್ತದೆ ಎಂದರೆ ಸರಿ. ದೇಹದ ಒಟ್ಟು ನ್ಯೂನತೆಯನ್ನು ಅಂದಾಜು ಮಾಡಬೇಕಾದರೆ ಅದನ್ನು 3/1 ಭಾಗ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಗಾಯಾಳುವಿಗೆ ನೀಡಿರುವ ಚಿಕಿತ್ಸೆ ಬಗ್ಗೆ ಸಂಪೂರ್ಣ ಮಾಹಿತಿ ಮತ್ತು ನನ್ನ ಸಹಿ ನಾನು ಹಾಜರುಪಡಿಸಿರುವ ಮೆಡಿಕಲ್ ರೆಕಾರ್ಡನಲ್ಲಿ

ಇದೆ ಎಂದರೆ ಸರಿ. ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಅರ್ಜಿದಾರರು ಔಷಧಿಗಳನ್ನು ಹೊರಗಡೆಯಿಂದ ತರಲು ಸಲಹಾ ಚೀಟಿಗಳನ್ನು ನೀಡಿದ್ದೇವೆ. ನಾನು ಇಂದು ಹಾಜರುಪಡಿಸಿರುವ ದಾಖಲಾತಿಗಳನ್ನು ಅರ್ಜಿದಾರರಿಗೆ ಸಹಾಯ ಮಾಡುವ ಸಲುವಾಗಿ ಇತ್ತೀಚೆಗೆ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಸಲುವಾಗಿ ಹೆಚ್ಚಿನ ಪ್ರಮಾಣದ ಅಂಗ ನ್ಯೂನತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**